**ರಾಣೆಬೆನ್ನೂರ್ ತಾಲ್ಲೂಕಿನಲ್ಲಿ ಸಮುದಾಯ ಕುಡಿಯುವ ನೀರಿನ ಸರಬರಾಜು ಯೋಜನೆ.**

2519 ಶ್ರೀ ಕೆ.ಬಿ. ಕೋಳಿವಾಡ (ರಾಣೆಬೆನ್ನೂರು): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

1) *ರಾಣೆಬೆನ್ನೂರು ತಾಲ್ಲೂಕಿನ ತಿಮ್ಮನಹಳ್ಳಿ ಮೆಣಸಿನಹಾಳ ಪತ್ತೆಪೂರ್ ಮಲನಾಯನಹಳ್ಳಿ ಬಡೆ ಬನಾಪೂರ್ ಸಣ್ಣ ಸಂಗಾಪುರ್ ಗ್ರಾಮಗಳಿಗೆ ಸಮುದಾಯ ಕುಡಿಯುವ ನೀರಿನ ಸರಬರಾಜು ಯೋಜನೆಯನ್ನು ನಿರ್ಮಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಿರುವರೇ?*

2) *ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?*

ಶ್ರೀ ಕೆ.ಪೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1) ಜಿಲ್ಲಾ ಪರಿಷತ್‌ಗೆ ಮನವಿಯನ್ನು ಮಾಡಿರುತ್ತಾರೆ.

2) ನಿಯಮಾವಳಿಗಳ ಪ್ರಕಾರ ಇವಾಗಿರುವ ನೀರಿನ ವ್ಯವಸ್ಥೆ ಸರಿಯಾಗಿದೆ.

**ತುಮಕೂರಿನಲ್ಲಿ ಸಾಹಿತ್ಯ ಭವನವನ್ನು ನಿರ್ಮಿಸುವುದು**

2616 ಶ್ರೀ ಕೆ.ಲಕ್ಕಪ್ಪ (ಕುಣಿಗಲ್): ಮಾನ್ಯ ಯುವಜನ ಸೇವೆ ಕ್ರೀಡೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) *ವಿವಿಧ ಸಾಹಿತ್ಯಕ ಕಾರ್ಯಕ್ರಮಗಳನ್ನು ನಡೆಸಲು ತುಮಕೂರಿನಲ್ಲಿ ಸಾಹಿತ್ಯ ಭವನವನ್ನು ನಿರ್ಮಿಸುವ ಪ್ರಸ್ತಾವನೆ ಇದೆಯೇ?*

ಆ) *ಇಲ್ಲದಿದ್ದಲ್ಲಿ 1991-92ನೇ ಸಾಲಿನಲ್ಲಿ ತುಮಕೂರಿನಲ್ಲಿ ಸಾಹಿತ್ಯ ಭವನವನ್ನು ಸರ್ಕಾರದ ವತಿಯಿಂದ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?*

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಇಲ್ಲ

ಆ) ಇಲ್ಲ

**ಶ್ರೀರಂಗಪಟ್ಟಣವನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಅಭಿವೃದ್ಧಿ**

2523 ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ): ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) *ಪ್ರವಾಸಿ ವರ್ಷದಲ್ಲಿ ಶ್ರೀರಂಗಪಟ್ಟಣವನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಅಭಿವೃದ್ಧಿ ಪಡಿಸಲು ಸರ್ಕಾರ ಯೋಚಿಸಿದೆಯೇ?*

ಆ) *ಪ್ರವಾಸಿಗರಿಗೆ ಒದಗಿಸಲಾಗಿರುವ ವಸತಿ ಸೌಲಭ್ಯಗಳು ಏನು?*

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):

ಅ) ಇಲ್ಲ

ಆ) ಉಪಹಾರ ಗೃಹದೊಂದಿಗೆ ಒಂದು ರೂಮಿನಲ್ಲಿ ಎರಡು ಹಾಸಿಗೆಯುಳ್ಳಂತೆ ಮೂರು ಜೋಡಿ ಕಾಟೇಜುಗಳನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ

ನಿಗಮ ನಿರ್ವಹಿಸುತ್ತಿದೆ. ಪ್ರವಾಸೋದ್ಯಮ ಇಲಾಖೆ ಇತ್ತೀಚೆಗೆ ಈ ಸೌಲಭ್ಯಕ್ಕೆ ಎರಡು ಜೋಡಿ ಕಾಟೇಜುಗಳನ್ನು ಹೆಚ್ಚುವರಿಯಾಗಿ ಸೇರಿಸಲಾಗಿದೆ.

**ಕೃಷ್ಣ ಮೇಲ್ದಂಡೆ ಯೋಜನೆ ಮೇಲೆ ಇದುವರೆವಿಗೂ ಆದ ವೆಚ್ಚ**

2464 - ಶ್ರೀ ಪೆರಿಕಲ್ ಎಂ ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೇಲೆ ಇದುವರೆವಿಗೂ ವೆಚ್ಚ ಆದ ಹಣವೆಷ್ಟು?

ಆ) ಆದರಲ್ಲಿ ವಿಶ್ವಬ್ಯಾಂಕಿನವರು ಈ ಯೋಜನೆಗೆ ಕೊಟ್ಟಿರುವ ಹಣ ಎಷ್ಟು?

ಇ) ಈ ಯೋಜನೆಗೆ 1990-91ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಲಾದ ಹಣ ಎಷ್ಟು

ಈ) ಈ ಯೋಜನೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದ ವೇತನ ಮತ್ತು ಭತ್ಯಗಳಿಗೆ 1990-91ನೇ ಸಾಲಿನಲ್ಲಿ ವೆಚ್ಚ ಮಾಡಿದ ಹಣ ಎಷ್ಟು?

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಮೇಲೆ ಜುಲೈ 1991 ಕೊನೆಯವರೆಗೆ 860 ಕೋಟಿ ರೂಗಳು ವೆಚ್ಚವಾಗಿದೆ.

ಆ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಮೊದಲ ಹಂತಕ್ಕೆ ವಿಶ್ವಬ್ಯಾಂಕಿನವರಿಂದ 117.64 ಮಿಲಿಯನ್ ಡಾಲರ್‌ಗಳ ಸಹಾಯ ಪಡೆಯಲಾಗಿದೆ. ಈ ಯೋಜನೆಯ ಮೊದಲ ಘಟ್ಟದ 2ನೇ ಹಂತಕ್ಕೆ 325 ಮಿಲಿಯನ್ ಡಾಲರ್‌ಗಳ ಸಹಾಯಕ್ಕೆ ವಿಶ್ವಬ್ಯಾಂಕಿನವರೊಡನೆ ಒಪ್ಪಂದವಾಗಿದ್ದು ಇದುವರೆವಿಗೂ 15:07 ಮಿಲಿಯನ್ ಡಾಲರುಗಳು ಮರು ಪಾವತಿ ಪಡೆಯಲಾಗಿದೆ.

ಇ) ಈ ಯೋಜನೆಗೆ 1990-91ನೇ ಸಾಲಿನ ಆಯವ್ಯಯದಲ್ಲಿ 80 ಕೋಟಿ ರೂಗಳಿಗೆ ಅವಕಾಶ ಮಾಡಲಾಗಿತ್ತು.

ಈ) 64.63 ಕೋಟಿ ರೂಗಳು

ಉ) 11.46 ಕೋಟಿ ರೂಗಳು

**ಮಹಾದಾಯಿ ಪ್ರಾಜೆಕ್ಟ್‌ನಿಂದ ಮಲಪ್ರಭಾ ನದಿಗೆ ನೀರಿನ್ನು ಬಿಡುವುದರ ಕರಿತು**

2469- ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಮಹಾದಾಯಿ ಪ್ರಾಜೆಕ್ಟ್‌ನಿಂದ ಮಲಪ್ರಭಾ ನದಿಗೆ ಎಷ್ಟು ಟಿ.ಎಂ.ಸಿ. ನೀರನ್ನು ಬಿಡಬೇಕೆಂದು ಒಪ್ಪಂದ ಮಾಡಲಾಗಿದೆ.

ಆ) ಮಹಾದಾಯಿ ಪ್ರಾಜೆಕ್ಟರ್ಸ್ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆಯೇ?

ಇ) ಆವುಗಳಿಗೆ ಮಂಜೂರಾತಿಯನ್ನು ಯಾವ ದಿನಾಂಕದಂದು ಕೊಡಲಾಗಿದೆ

ಈ) ತಾಂತ್ರಿಕ ಹಾಗೂ ಆಡಳಿತಾತ್ಮಕ್ಕೆ ಮಂಜೂರಾತಿ ಮಾಡಿರುವ ಹಣ ಎಷ್ಟು